## ೯. ಸ.ಹಿ.ಪ್ರಾ.ಶಾ. ಚಿಕ್ಕಜಂಬೂರು, ಶಿಕಾರಿಪುರ ತಾ|| ಶಿವಮೊಗ್ಗ ಜಿ||

ಶಿಕ್ಷಣ ಮಾನವನ ವ್ಯಕ್ತಿತ್ವಕ್ಕೆ ಒಂದು ರೂಪವನ್ನು ಹೊಳಪನ್ನು ನೀಡುವ ಕ್ರಿಯೆ. ನಡೆವಷ್ಟು ದಾರಿಯಿದೆ ಪಡೆವಷ್ಟು ಶಿಕ್ಷಣವಿದೆ ಶಿಕ್ಷಣ ಪಡೆಯಲು ಅಥವಾ ಕಲಿಯಲು ಆರಂಭವಿದೆಯೇ ಹೊರತು ಅಂತ್ಯವಿಲ್ಲ.

ಶಿವಶರಣರ ನಾಡು ಶಿಕಾರಿಪುರ ತಾಲ್ಲೂಕು ಕೇಂದ್ರಕ್ಕೆ ಸುಮಾರು 25 ಕಿ.ಮೀ ದೂರದಲ್ಲಿರುವ ಒಂದು ಪುಟ್ಟ ಗ್ರಾಮ ಚಿಕ್ಕಜಂಬೂರು. ಈ ಗ್ರಾಮದಲ್ಲಿ ಸದರಿ ಶಾಲೆಯು ಪ್ರಾರಂಭವಾಗಿದ್ದು 1960 ರಲ್ಲಿ. ಇಲ್ಲಿನ ಗ್ರಾಮಸ್ಥರು ಹೆಚಿನ ಸಂಖ್ಯೆಯಲ್ಲಿ ಅಲ್ಪಸಂಖ್ಯಾತರು. ಅಂದರೆ ಮುಸ್ಲಿಂ ಬಾಂಧವರಿದ್ದು ಅಲ್ಪ ಪ್ರಮಾಣದಲ್ಲಿ ಪರಿಶಿಷ್ಟ ಜಾತಿಯವರಿದ್ದಾರೆ. ಇಲ್ಲಿ ಬಹುತೇಕ ಅನಕ್ಷರಸ್ಥರೇ ಇರುವ ಹಾಗೂ ಹೊಟ್ಟೆಪಾಡಿಗಾಗಿ ಕೂಲಿಕೆಲಸವನ್ನೇ ಆಶ್ರಯಿಸಿ ಕೊಂಡಿರುವ ಕುಟುಂಬಗಳೇ ಹೆಚ್ಚು ಇಂತಹ ಕುಟುಂಬಗಳಿಂದ ಶಿಕ್ಷಣವನ್ನರಸಿ ಬರುವ ವಿದ್ಯಾರ್ಥಿಗಳಿಗೆ ಅಕ್ಷರ ಜ್ಞಾನದ ದಾಹವನ್ನು ನೀಗಿಸುವುದೇ ಶಿಕ್ಷಕರಿಗೆ ಪುಣ್ಯದ ಕೆಲಸ. ಇಲ್ಲಿನ ಮಕ್ಕಳಲ್ಲಿ ಹಲವರು ಉರ್ದು ಭಾಷಿಕರಾಗಿದ್ದು ಕಲಿಕೆ ಉಂಟು ಮಾಡಲು ನಿರಂತರ ಕಠಿಣ ಶ್ರಮ ಪಡಬೇಕಾಗುತ್ತದೆ.




ಪ್ರಸ್ತುತ ಶಾಲೆಯಲ್ಲಿ ಮಂಜೂರಾದ 4 ಹುದ್ದೆಗಳಲ್ಲಿ ವರ್ಗವಣೆ ಮತ್ತು ನಿವೃತ್ತಿಯಿಂದಾಗಿ ಕೇವಲ ಎರಡು ಜನ ಶಿಕ್ಷಕರು ಮಾತ್ರ ಕರ್ತವ್ಯ ನಿರ್ವಹಿಸುತ್ತಿದ್ದು, ಇತ್ತಿಚೆಗೆ ಒಬ್ಬ ಅಥಿತಿ ಶಿಕ್ಷಕರನ್ನು ಇಲಾಖೆ ನೀಡಿದೆ 1 ರಿಂದ 7ನೇ ತರಗತಿಯವರೆಗೆ ಒಟ್ಟು 64 ಮಕ್ಕಳಿದ್ದು ಇಳಾಖೆಯಿಂದ ದೊರೆಯುವ ಎಲ್ಲಾ ಪ್ರೋತ್ಸಾಹದಾಯಕ ಯೋಜನೆಗಳು ಫಲಪ್ರದಾಯವಾಗಿವೆ. ಎಂದು ಹೇಳಲು ಹೆಮ್ಮೆ ಎನಿಸುತ್ತದೆ.

ಶಾಲೆಯು ಸುಸಜ್ಜಿತವಾದ ಎರಡು ಆರ್ ಸಿ ಸಿ ಕಟ್ಟಡಗಳನ್ನು ಹೊಂದಿದ್ದು ಹೆಂಚಿನ 3 ಹಳೆಯ ಕೊಠಡಿಗಳನ್ನು ಹೊಂದಿದೆ ಮಕ್ಕ:ಳಿಗೆ ಕೂರಲು ಮಣೆ, ಬೆಂಚು ಹಾಗೂ ಡೆಸ್ಕುಗಳು ಇವೆ. ಶಾಲೆಯ ಸುತ್ತಲೂ 4 ಅಡಿ ಎತ್ತರ ನಿರ್ಮಿಸಲು ಉದ್ದೇಶಿಸಿದ್ದ ಕಾಂಪೌಂಡನ್ನು ಶಿಕ್ಷಕರ ಕಾಳಜಿಯ ಒತ್ತಡದಿಂದಾಗಿ 5 ಅಡಿ ಎತ್ತರ ಸುಭದ್ರವಾಗಿ ನಿರ್ಮಿಸಲಾಗಿದೆ.

2011 – 12 ನೇ ಸಾಲಿನಲ್ಲಿ ಶಿಕ್ಷಕರ ಒತ್ತಡದ ಮೇರೆಗೆ ಜಿಲ್ಲಾ ಪಂಚಾಯಿತಿ ಸದಸ್ಯರ ಧನ ಸಹಾಯದಲ್ಲಿ ಕುಡಿಯುವ ನೀರಿಗಾಗಿ ಬೋರ್‌ವೆಲ್ ಕೊರೆಯಲಾಯಿತು. ಆದರೆ ನೀರು ಕಡಿಮೆ ಇರುವ ಕಾರಣ ಬೇಸಿಗೆಯಲ್ಲಿ ಇದರಿಂದ ನೀರು ಲಭ್ಯವಾಗುದಿಲ್ಲ. ಅದಕ್ಕಾಗಿ ಬೀದಿನಲ್ಲಿಯ ಸಂಪರ್ಕ ಪಡೆದು ನೀರನ್ನು ಪಡೆಯಲಾಗುತ್ತಿದೆ. ಶಾಲೆಯ ಮಧ್ಯಾಹ್ನದ ಬಿಸಿಯೂಟಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ದಾಸ್ತಾನು ಕೊಠಡಿ ಮತ್ತು ಅಡುಗೆ ಕೋಣೆಗಳಿದ್ದು ಇಲ್ಲಿ ಶುಭ್ರತೆಗೆ ಹೆಚ್ಚು ಪ್ರಾಧ್ಯಾನ್ಯತೆ ನೀಡಲಾಗಿದೆ. ನೀರಿನ ಟ್ಯಾಂಕ್ 15 ದಿನಕ್ಕೊಮ್ಮೆ ತೊಳೆದು ಸ್ವಚ್ಚಗೊಳಿಸಿ ಶುದ್ಧನೀರನ್ನು ತುಂಬಿಸಲು ಸಾಧ್ಯವಾಗುವಂತೆ ಟ್ಯಾಂಕ್‌ನ್ನು ಅಡುಗೆ ಕೋಣೆಯಲ್ಲಿಯೇ ಇಡಲಾಗಿದೆ. ಮಕ್ಕಳಿಗೆ ಕುಡಿಯಲು ಫಿಲ್ಟರ್‌ನಲ್ಲಿ ಶೋಧಿಸಿದ ನೀರನ್ನು ಪೂರೈಕೆ ಮಾಡಲಾಗುತ್ತದೆ.

ಶಾಲಾವರಣದ ಸ್ವಚ್ಚತೆ, ಶೌಚಾಲಯದ ಸ್ವಚತೆ ಮತ್ತು ಬಳಕೆಯ ಬಗ್ಗೆ ಹಾಗೂ ಮಕ್ಕಳ ವಯಕ್ತಿಕ ಸ್ವಚ್ಚತೆಯ ಬಗ್ಗೆ ಅರಿವು ಮೂಡಿಸುವ ಪ್ರಾತ್ಯಕ್ಷಿಕೆಯನ್ನು ಆಗಾಗ್ಗೆ ಕೈಗೊಳ್ಳಲಾಗುತ್ತದೆ.





ಶಾಲೆಯ ಕಡೆ ಎಲ್ಲರ ಚಿತ್ತ ಆಕರ್ಶಿಸುವ ಭಾಗವೆಂದರೆ ನಮ್ಮ ಶಾಲಾ ಕೈತೋಟ. ಇರುವ ಕಡಿಮೆ ಸ್ಥಳಾವಕಾಶದಲ್ಲಿ ಶಿಕ್ಷಕರು ಮತ್ತು ಮಕ್ಕಳ ಸಹಭಾಗಿತ್ವದಲ್ಲಿ ನಿರ್ಮಿಸಿರುವ ಶಾಲಾ ಕೈತೋಟದಲ್ಲಿ ವಿವಿಧ ರೀತಿಯ ಅಲಂಕಾರಿಕ ಗಿಡಗಳು, ಹೂವಿನ ಗಿಡಗಳಾದ ದಾಸವಾಳ, ಮಲ್ಲಿಗೆ, ಗುಲಾಬಿ, ಸಂಪಿಗೆ, ಚಂಡು ಹೂ ಹಾಗೂ ಹಣ್ಣಿನ ಗಿಡಗಳಾದ ಬಾಳೆ, ಮಾವು, ನಿಂಬೆ, ಪೇರಲ, ಪಪ್ಪಾಯ ಗಿಡಗಳಲ್ಲದೆ ಸೊಪ್ಪು ತರಕಾರಿಗಳನ್ನು ಬೆಳೆಯಲಾಗುತ್ತದೆ. ಆದರೆ ಕೆಲವು ಕಿಡಿಗೇಡಿಗಳು ಹಣ್ಣು ಸೊಪ್ಪು ತರಕಾರಿಗಳನ್ನು ಕಳವು ಅಥವಾ ಹಾಳು ಮಾಡುತ್ತಿದ್ದಾರೆ. ಶಾಲೆಯ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ತೆಂಗಿನ ಮರಗಳು ಸಮೃದ್ದವಾಗಿ ಬೆಳೆದು ಕೆಲವು ಫಲವನ್ನು ನೀಡುತ್ತಿವೆ. ಕಳ್ಳರ ಹಾವಳಿ ತಪ್ಪಿಸಲು ಹರಾಜು ಬಿಡುಲಾಗಿದ್ದು, ಇದರಿಂದ ಬರುವ 4–5 ಸಾವಿರ ಹಣವನ್ನು ಶಾಲಾಭಿವೃದ್ಧಿಗೆ ಬಳಸಲಾಗುತ್ತಿದೆ.

**ಸಾವಯವ ಗೊಬ್ಬರ ತಯಾರಿಕೆ & ಬಳಕೆ**

ಶಾಲಾವರಣದಲ್ಲಿನ ಹುಲ್ಲು ಸೊಪ್ಪು ಕಸ ಕಡ್ಡಿ ಮುಂತಾದ ಕೊಳೆಯುವ ವಸ್ತುಗಳನ್ನು ಪ್ಲಾಸ್ಟಿಕ್‌ನಂತಹ ಕೊಳೆಯದ ವಸ್ತುಗಳನ್ನು ಪ್ರತ್ಯೇಕಿಸಿ ಶಾಲೆಯ ಹಿಂಭಾಗದ ಒಂದು ಮೂಲೆಯಲ್ಲಿ ಗುಂಡಿಮಾಡಿ ಅದರಲ್ಲಿ ಕಸ ಹಾಕಿ ಗೊಬ್ಬರ ತಯಾರಿಸಿ ಕೈ–ತೋಟದ ಗಿಡಗಳು ಹಾಗೂ ತೆಂಗಿನ ಮರಗಳಿಗೆ ಹಾಕಲಾಗುತ್ತದೆ.






ಈ ಕಾರ್ಯವನ್ನು ಸಂಪೂರ್ಣವಾಗಿ ಶಾಲಾ ಮಕ್ಕಳು & ಶಿಕ್ಷಕರುಗಳಿಂದಲೇ ನಿರ್ವಹಿಸಲಾಗುತ್ತದೆ. ಆದರೆ ಈಗ ಇನ್ನೂ ಒಂದು ಹೆಜ್ಜೆ ಮುಂದಿಟ್ಟು ಮಕ್ಕಳಿಗೆ ಎರೆಹುಳು ಗೊಬ್ಬರದ ತಯಾರಿಕೆ ಮತ್ತು ಬಳಕೆ ಮಹತ್ವದ ಅರಿವು ಮೂಡಿಸುವ ಉದ್ದೇಶದಿಂದ ಶಾಲೆಯಲ್ಲಿ ಈಗಾಗಲೇ ಇರುವ ಒಂದು ಹಳೆಯ ನೀರಿನ ತೊಟ್ಟಿಯನ್ನು ಎರೆಹುಳು ಗೊಬ್ಬರ ತಯಾರಿಕ ಘಟಕವನ್ನಾಗಿ ಪರಿವರ್ತಿಸಿಕೊಂಡು ಗೊಬ್ಬರ ತಯಾರಿಕೆ ನಡೆಯುತ್ತಿದೆ.

ಕಲಿಕಾ ಹಂತದ ಅಡಿಪಾಯವೆಂದೇ ಪರಿಗಣಿಸಿರುವ ನಲಿಕಲಿ ತರಗತಿ ಕೊಠಡಿಯಾಗಿದ್ದು ಸುಣ್ಣಬಣ್ಣ ಹಾಗೂ ಉತ್ತಮವಾದ ಬರಹಗಳಿಂದ ಕೂಡಿದ್ದು ಸೂಕ್ತ ಕಲಿಕೋಪಕರಣಗಳ ಸಹಾಯದಿಂದ ಚಟುವಟಿಕೆಯುಕ್ತ ಕಲಿಕೆಯಲ್ಲಿ ಶಿಕ್ಷಕರು ಅವಿರತ ಪ್ರಯತ್ನ ಮಾಡುತ್ತಿದ್ದು ಮಕ್ಕಳೂ ಸಹ ಕಲಿಕೆಯಲ್ಲಿ ಮುಂದಿದ್ದಾರೆ.



ಪ್ರತಿ ಮಗುವಿಗೂ ವೈಯಕ್ತಿಕ ಗಮನ ಹರಿಸುವ ಮೂಲಕ ಭಯರಹಿತ ವಾತಾವರಣದಲ್ಲಿ ಚಟುವಟಿಕೆಗಳ ಮೂಲಕ ಮಕ್ಕಳಿಗೆ ಆಸಕ್ತಿ ಮೂಡಿಸಿ ಕಲಿಕೆಯಲ್ಲಿ ತೊಡಗುವಂತೆ ಮಾಡಿ ಮಕ್ಕಳ ಶಾಲೆಗೆ ಗೈರಾಗದಂತೆ ನೋಡಿಕೊಂಡು ಉತ್ತಮ ಹಾಜರಾತಿ ಕಾಪಾಡಿಕೊಳ್ಳಲು ಸಾಧ್ಯವಾಗಿದೆ.

ಮಕ್ಕಳನ್ನು ಕಲಿಕೆಯನ್ನು ತೊಡಗಿಸಲು ಶಿಕ್ಷಕರು ತಿಂಗಳಿಗೊಮ್ಮೆ ಪೋಷಕರ ಸಭೆ ಕರೆದು ಮಕ್ಕಳ ಪ್ರಗತಿಯ ಬಗ್ಗೆ ಚರ್ಚಿಸುವುದಲ್ಲದೆ ವಾರಕ್ಕೆ 2–3 ದಿನ ಸಂಜೆ ವೇಳೆ ಮಕ್ಕಳ ಮನೆಗೆ ಭೇಟಿ ನೀಡಿ ಮಕ್ಕಳು ಕಲಿಕೆಯಲ್ಲಿ ತೊಡಗಿರುವರೋ ಇಲ್ಲವೋ ಎಂದು ಪರೀಕ್ಷಿಸುವರು. ಹಾಗೂ ಆಯಾ ಪೋಷಕರೊಡನೆ ಕಲಿಕೆಯ ಬಗ್ಗೆ ಚರ್ಚೆ ನಡೆಸಿ ಸಲಹೆ ನೀಡುವರು.

ಶಾಲಾವಧಿಯಲ್ಲಿ ಶಿಕ್ಷಕರು ಸಮಯ ವ್ಯರ್ಥ ಮಾಡದೇ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತಿರುವರು. ಬಡ ಮಕ್ಕಳಿಗೆ ಗುಣಮಟ್ಟದ ಉಚಿತ ಶಿಕ್ಷಣ ಸಿಗಲೆಂಬ ಸದುದ್ದೇಶದಿಂದ ವಿಶೇಷ ತರಬೇತಿ ನೀಡುವ ಮೂಲಕ ಪ್ರತಿವರ್ಷ 50% ಮಕ್ಕಳು ಮುರಾರ್ಜಿ ಶಾಲೆಗೆ ಆಯ್ಕೆಯಾಗುತ್ತಿದ್ದಾರೆ. ಈ ಎಲ್ಲದರ ಪರಿಣಾಮವಾಗಿ ನಮ್ಮ ಶಾಲೆಯಲ್ಲಿ ಕಲಿತ ಮಕ್ಕಳು ಮುಂದೆ ಪ್ರೌಢಶಾಲೆಯಲ್ಲಿ ಉನ್ನತ ಸಾಧನೆ ಮಾಡುತ್ತಿದ್ದಾರೆ, ಎಸ್ ಎಸ್ ಎಲ್ ಸಿ ನಲ್ಲಿ ಉನ್ನತ ಶ್ರೇಣಿಯೊಂದಿಗೆ ಇಡೀ ಶಾಲೆಗೇ ಪ್ರಥಮ ಸ್ಥಾನ ಗಳಿಸಿದ್ದಾರೆ, ಕನ್ನಡದಲ್ಲಿ 125 ಅಂಕ ಪಡೆದು ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಶಸ್ತಿ ಗಳಿಸಿದ್ದಾರೆ.

ಕೇಲವು ಪಠ್ಯಚಟುವಟಿಕೆಗಳಲ್ಲಿ ಮಾತ್ರವಲ್ಲದೆ ಪಠ್ಯೇತರ ಚಟುವಟಿಕೆಗಳಲ್ಲಿಯೂ ಮಕ್ಕಳು ಭಾಗವಹಿಸಿ ಸಾಧನೆ ಮಾಡುತ್ತಿದ್ದಾರೆ. ಪ್ರತಿಭಾಕಾರಂಜಿಯಲ್ಲಿ ಕ್ವಿಜ್, ಜಾನಪದ ನೃತ್ಯ, ಕೋಲಾಟ, ಕಂಠಪಾಠ ಮುತಾಂದ ಸ್ಪರ್ಧೆಗಳಲ್ಲಿ ಕ್ಲಸ್ಟರ್ ಮಟ್ಟದಲ್ಲಿ ಅತಿ ಹೆಚ್ಚಿನ ಪ್ರಶಸ್ತಿಗಳನ್ನು ಪಡೆದು ತಾಲ್ಲೂಕು ಮಟ್ಟದಲ್ಲಿ ಗೆದ್ದು ಪ್ರಶಸ್ತಿಗಳಿಸಿದ್ದಾರೆ



ಹಾಗೆಯೇ ಕಂಸಾಳೆ ನೃತ್ಯದಲ್ಲಿ ಜಿಲ್ಲಾಮಟ್ಟದವರೆಗೂ ಭಾಗವಹಿಸಿ ಸಾಧನೆ ಪ್ರದರ್ಶಿಸಲಾಗಿದೆ.

ಹೆಚ್ ಪಿ ಎಸ್ ನಲ್ಲಿ ಮಕ್ಕಳ ಸಂಖ್ಯೆ ಕಡಿಮೆ ಇದೆ. ಆಟ ಆಡಲು ಕ್ರೀಡಾಂಗಣವೂ ಇಲ್ಲ ಆದಾಗ್ಯೂ ಕ್ರೀಡಾಕೂಟದ ಕೆಲವು ಕ್ರೀಡೆಗಳಲ್ಲಿ ತಾಲ್ಲೂಕು ಮಟ್ಟದವರೆಗೂ ಭಾಗವಹಿಸಿ ಸಾಧನೆ ಮೆರೆದಿದ್ದಾರೆ. ನಮ್ಮ ಮಕ್ಕಳು ಜಿಲ್ಲಾಮಟ್ಟದಲ್ಲಿ ಭಾಗವಹಿಸಿದ ಕೆಲವೇ ಕೆಲವು ಉದಾಹರಣೆಗಳಿವೆ.

ಈ ಎಲ್ಲಾ ಸಾಧನೆಗಳಿಗೆ ಕಾರಣಕರ್ತರಾದ ನಿವೃತ್ತ ಮುಖ್ಯ ಶಿಕ್ಷಕರಾದ ಶ್ರೀ ಕೃಷ್ಣಪ್ಪ ಹೆಚ್, ಹಾಲಿ ಪ್ರಭಾರಿ ಮುಖ್ಯ ಶಿಕ್ಷಕರಾದ ಶಿವಪ್ಪ ಎಂ, ಸಹ ಶಿಕ್ಷಕಿ ಶ್ರೀಮತಿ ಕಾಳಮ್ಮ ಸಿ ಮಾಯಾಚಾರಿ, ಅತಿಥಿಶಿಕ್ಷಕರಾದ ಶ್ರೀ ಧರ್ಮಪ್ಪ ಹೆಚ್ ವರ್ಗಾವಣೆಗೊಂಡಿರುವ ಶ್ರೀಮತಿ ಗಿರಿಜಮ್ಮ, ಶಾಲೆಯ ಎಸ್ ಡಿ ಎಂ ಸಿ ಸಮಿತಿಯವರು, ಪೋಷಕರು ಹಾಗೂ ಗ್ರಾಮಪಂಚಾಯಿತಿಯವರ ಸಹಕಾರ ಮತ್ತು ಶ್ರಮ ಸ್ಮರಿಸುವಂತದ್ದು.